# ಸಮೃದ್ಧಿಯ ಶಾಪ

ನಾವೆಲ್ಲ ಮೈದಾಸನ ಕಥೆ ಕೇಳಿದ್ದೇವೆ. ತಾನು ಮುಟ್ಟಿದುದೆಲ್ಲವೂ ಚಿನ್ನವಾಗಬೇಕೆಂಬ ವರ ಪಡೆದ ಮೈದಾಸ ತನ್ನ ಕೈಗೆ ಎಟುಕಿದ ಎಲ್ಲವನ್ನೂ ಮುಟ್ಟಿ ಚಿನ್ನವಾಗಿಸಿಕೊಂಡ. ಸುತ್ತಲಿನ ಗೋಡೆ, ಛಾವಣಿಯನ್ನು ಎತ್ತಿ ಹಿಡಿದಿದ್ದ ಕಂಭ, ಮನೆಯೊಳಗಿನ ಪೀಠೋಪಕರಣ ಎಲ್ಲವೂ ಹೊಳೆಯುವ ಬಂಗಾರವಾಯಿತು. ಮೈದಾಸನ ಸಂತೋಷಕ್ಕೆ ಪಾರವೇ ಇಲ್ಲ. ಅಷ್ಟರಲ್ಲಿ ಆತನಿಗೆ ನೀರಡಿಕೆಯಾಯಿತು. ನೀರಿನ ಹೂಜಿಯನ್ನು ಕೈಗೆತ್ತಿಕೊಂಡ. ಅದು ಚಿನ್ನದ ಹೂಜಿಯಾಯಿತು. ಅದರಲ್ಲಿದ್ದ ನೀರೂ ಬಂಗಾರದ ದ್ರವವಾಯಿತು. ಅದನ್ನು ಕುಡಿಯುವುದಾದರೂ ಹೇಗೆ? ತಿನ್ನಬೇಕಿದ್ದ ಆಹಾರವೂ ಚಿನ್ನ. ಓಡಿ ಬಂದು, ಪ್ರೀತಿಯಿಂದ ತಬ್ಬಿಕೊಂಡ ಮುದ್ದಿನ ಮಗು ನಿರ್ಜೀವ ಬಂಗಾರದ ಬೊಂಬೆಯಾಗಿ ಮಾರ್ಪಟ್ಟಿತು. ಆಗ ಮೈದಾಸನಿಗೆ ತನ್ನ ಅವಿವೇಕದ ಅರಿವಾಗಿ, ತನಗೆ ನೀಡಿದ ವರವನ್ನು ಹಿಂತೆಗೆದುಕೊಳ್ಳುವಂತೆ ದೇವರನ್ನು ಬೇಡಿಕೊಂಡ.

ಎಲ್ಲ ಕಾಲದಲ್ಲೂ– ಮೈದಾಸನಂತೆ ಇಂಥ ಸಮೃದ್ಧಿಯ ಶಾಪದಿಂದ ನರಳುವವರು ಇರುತ್ತಾರೆ. ಯಾವ ವಸ್ತುವಾದರೂ ಅಗತ್ಯಕ್ಕಿಂತ ಹಲವು ಪಟ್ಟು ಅಧಿಕವಾಗಿ, ಶ್ರಮವಿಲ್ಲದೇ ನಮಗೆ ದೊರೆಯುವಂತಾದರೆ, ಅದು ಸಂತೋಷಕ್ಕಿಂತ ಸಂಕಟಕ್ಕೇ ದಾರಿ ಮಾಡಿಕೊಡುತ್ತದೆ. ಜೀವಪೋಷಣೆಗೆ ಅತ್ಯವಶ್ಯವಾಗಿರುವ ನೀರು ಪ್ರವಾಹ ರೂಪದಲ್ಲಿ ನುಗ್ಗಿದರೆ, ಉಸಿರಾಡಲು ಬೇಕಾಗುವ ಗಾಳಿ ಚಂಡಮಾರುತವಾಗಿ ವಿಜೃಂಭಿಸಿದರೆ ಜೀವ ಜಗತ್ತು ತತ್ತರಿಸಿ ಹೋಗುತ್ತದೆಯಲ್ಲವೆ? ಅದೇರೀತಿ ಒಬ್ಬನ ಪಾಲಿಗೆ ಅನಾಯಾಸವಾಗಿ ಅಪಾರ ಸಂಪತ್ತು ದೊರೆತರೆ, ಆತನ ಬದುಕಿನ ಸಮತೋಲನ ನಾಶವಾಗುತ್ತದೆ. ಸಮೃದ್ಧಿಯೆಂಬುದು ಶಾಪವಾಗಿ ಬದಲಾಗುವ ವಿಪರ್ಯಾಸವಿದು. ' War destroys men; but luxury destroys mankind' ಎಂಬ ಹೇಳಿಕೆ ಇದನ್ನೇ ಸಮರ್ಥಿಸುತ್ತದೆ. ಪಿತ್ರಾರ್ಜಿತವಾದ ಹೇರಳ ಆಸ್ತಿಯನ್ನು ಪಡೆದಿರುವ ವ್ಯಕ್ತಿ ತನ್ನ ಕ್ರಿಯಾಶೀಲತೆಯನ್ನು ಕಳೆದುಕೊಂಡು, ಜಡನಾಗುತ್ತಾನೆ. ಸೋಮಾರಿತನದ ಗೂಡಾಗುವ ಆತನ ಮನಸ್ಸು ಪಿಶಾಚಿಗಳ ಕಾರ್ಯಾಗಾರವಾಗುತ್ತದೆ. ಪರಿಣಾಮವಾಗಿ ಆತ ತನ್ನ ಐಶ್ವರ್ಯವನ್ನು ಹಲವಾರು ರೀತಿಯ ಕೆಟ್ಟ ಚಟಗಳಿಗೆ ವಿನಿಯೋಗಿಸುತ್ತಾ, ತಾನೂ ಹಾಳಾಗುತ್ತಾನೆ; ತನ್ನ ಸಂಗಡಿಗರನ್ನೂ ಅಡ್ಡದಾರಿಗೆಳೆಯುತ್ತಾನೆ. ಇದೆಲ್ಲವೂ ಸಮೃದ್ಧಿಯ ಶಾಪದ ಪರಿಣಾಮವಲ್ಲವೆ?

'ಸುಲಭ ಲಭ್ಯದಿ ಕುತುಕ ಲವಣ ವಿರದು' –ಎನ್ನುತ್ತಾರೆ ಡಿ.ವಿ.ಜಿ. ಯಾವುದು ಕಷ್ಟವಿಲ್ಲದೆ, ಧಾರಾಳವಾಗಿ ದೊರೆಯುತ್ತದೆಯೋ, ಅಂಥ ವಸ್ತುವಿನ ಬಗೆಗೆ ನಮಗೆ ಕುತೂಹಲವಾಗಲೀ, ಆಸಕ್ತಿಯಾಗಲೀ ಇರುವುದಿಲ್ಲವೆಂಬುದು ಇದರ ಅರ್ಥ. ಹೊಟ್ಟೆ ತುಂಬಿರುವಾತನ ಎದುರು ಆತನಿಗೆ ಪ್ರಿಯವಾಗಿರುವ ತಿನಿಸನ್ನು ಇರಿಸಿ, ತಿನ್ನಲು ಎಷ್ಟೇ ಒತ್ತಾಯಿಸಿದರೂ, ಆತ ತಿನ್ನಲಾರ. ಹಸಿವಾದಾಗ ಮಾತ್ರ ಆಹಾರದ ಬಗ್ಗೆ ಆಸಕ್ತಿ ಹುಟ್ಟಿಕೊಳ್ಳುತ್ತದೆ; ಮಾತ್ರವಲ್ಲ, ಆಹಾರದ ರುಚಿಯೂ ಅನುಭವಕ್ಕೆ ಬರುತ್ತದೆ. ಮಗುವೊಂದನ್ನು ಅತೀ ಮುದ್ದಿನಿಂದ ಬೆಳೆಸಿ, ಅದು ಬಯಸಿದ ಹಾಗೂ ಬಯಸದ ಆಟಿಕೆ ಇತ್ಯಾದಿಗಳನ್ನು ಸದಾ ಒದಗಿಸುತ್ತಲೇ ಇದ್ದರೆ, ಮಗುವಿನ ಸಹಜ ವಿಕಾಸಕ್ಕೆ ಅಡಚಣೆಯುಂಟಾಗುತ್ತದೆ. ಯಾವುದೇ ಅತಿಯಾದರೂ, ಅದು ಅಪಾಯಕಾರಿ ಎನ್ನುವುದು ಎಲ್ಲ ಕಾಲಕ್ಕೂ ಸತ್ಯ.

ನಮ್ಮಲ್ಲಿ ಕೆಲವರಿಗೆ ಸಿಕ್ಕ ಸಿಕ್ಕ ವಸ್ತುಗಳನ್ನು ಕೊಂಡು ತಂದು, ಮನೆಗಳಲ್ಲಿ ಶೇಖರಿಸುವ ಚಟವಿರುತ್ತದೆ. ಮನಶ್ಶಾಸ್ತ್ರಜ್ಞರು ಈ ಪ್ರವೃತ್ತಿಯನ್ನು 'ಕೊಳ್ಳುವ ಕಾಹಿಲೆ' (Anio mania) ಎಂದು ಗುರುತಿಸುತ್ತಾರೆ. ಈ ವ್ಯಾಧಿಯಿಂದ ನರಳುವವರ ಮನೆಗಳು ವಸ್ತು ಸಂಗ್ರಹಾಲಯಗಳಾಗಿ ಪರಿವರ್ತಿತವಾಗುತ್ತವೆ. ಅವಶ್ಯಕತೆಗಿಂತ ಅಧಿಕವಾಗಿ ಸಂಗ್ರಹಿಸುವುದು ಸಾಮಾಜಿಕ ದ್ರೋಹವೆಂಬ ಅರಿವು ಇಂಥ ಕೊಳ್ಳುಬಾಕರಿಗೆ ಇರುವುದಿಲ್ಲ. ಬೇರೊಬ್ಬರಿಗೆ ಅಗತ್ಯವಾಗಿರುವ ವಸ್ತುಗಳನ್ನು ನಾವು ಕೂಡಿ ಹಾಕುವುದು ಬಹುದೊಡ್ಡ ಅಪರಾಧ ಎನ್ನುತ್ತಿದ್ದರು ಗಾಂಧೀಜಿ. 'ಅನಗತ್ಯವಾಗಿ ಸಂಗ್ರಹಿಸಿಟ್ಟುಕೊಂಡ ವಸ್ತು ಕದ್ದ ವಸ್ತುವಿನಂತೆ' ಎಂಬುದು ಗಾಂಧೀಜೀಯ ಅಭಿಪ್ರಾಯ. ಮನುಷ್ಯ ತನ್ನ ಸಂಗ್ರಹ ಪ್ರವೃತ್ತಿಯನ್ನು ಪ್ರಜ್ಞಾಪೂರ್ವಕ ಕಡಿಮೆ ಮಾಡುತ್ತಾ ಬಂದರೆ, ಆತನಿಗೆ ನಿಜವಾದ ಆನಂದ, ಸಂತೃಪ್ತಿ ಲಭ್ಯವಾಗುತ್ತವೆ ಎಂಬುದನ್ನು ಗಾಂಧೀಜಿ ಸ್ವಂತ ಜೀವನದಲ್ಲಿ ಅಳವಡಿಸಿಕೊಂಡು, ಇತರರಿಗೆ ತೋರಿಸಿದರು.

ಸಮೃದ್ಧಿಯ ಶಾಪದಿಂದ ದೂರವಿದ್ದು, ಆತ್ಯಂತಿಕ ಅಪರಿಗ್ರಹಿಗಳಾಗಿ, ತಮ್ಮ ಬದುಕನ್ನು ಕನಿಷ್ಠ ಅವಶ್ಯಕತೆಗಳಿಗೆ ಸೀಮಿತಗೊಳಿಸಿಕೊಂಡ ಸಾಧಕರು ನಿತ್ಯ ಸಂತೃಪ್ತರು, ಅಂಥವರನ್ನು ಕುರಿತೇ ಆಚಾರ್ಯ ಶಂಕರರು– 'ಕೌಪೀನವಂತಃ ಖಲುಭಾಗ್ಯವಂತಃ' (ಕೌಪೀನಧಾರಿಗಳಾದರೂ ಅವರು ಭಾಗ್ಯವಂತರು) ಎಂದಿರುವುದು!

**■ ವೈನತೇಯ**

## ಮಾತೇ ಮುತ್ತು

★ ಪ್ರತಿಭೆ ಮತ್ತು ಪ್ರಯತ್ನದಿಂದ ಏನನ್ನಾದರೂ ಸಾಧಿಸಿದವರ ಸಹವಾಸ ಒಳ್ಳೆಯದು.

-ಅಜ್ಞಾತ

★ ನಿಮ್ಮ ದಾನ ಧರ್ಮಗಳನ್ನು ಬಹಿರಂಗವಾಗಿ ಕೊಡುವುದಿದ್ದರೆ ಉತ್ತಮವೇ. ಆದರೆ ರಹಸ್ಯವಾಗಿ ಬಡಬಗ್ಗರಿಗೆ ದಾನ ಕೊಡುವುದು ಹೆಚ್ಚು ಉತ್ತಮ.

-ಕುರಾನ್

★ಸೂರ್ಯ ಮುಳುಗುತ್ತಿದ್ದ ಹಾಗೆ ಚಂದ್ರ ಕಾಣಿಸಿಕೊಳ್ಳುತ್ತಾನೆ. ಬೆಳಕನ್ನು ಕೊಡುವ ಇವರಿಬ್ಬರ ಮುಳುಗುವಿಕೆ ಹಾಗೂ ಉದಯ– ಇವೆರಡೂ ಜೀವನ ಎಂದರೆ ಸುಖ, ದುಃಖಗಳ ಮಿಶ್ರಣ ಎಂಬ ರೂಪಕದಂತೆ ಇವೆ.

-ಅಭಿಜ್ಞಾನ ಶಾಕುಂತಲ

★ ಶ್ರದ್ಧೆಯಿಂದಲೇ ಧರ್ಮವು ಬೆಳಗುತ್ತದೆ. ಬೇಕಾದಷ್ಟು ಹಣವಿದ್ದರೂ ಧರ್ಮವನ್ನು ಸಂಪಾದಿಸಲಾರ. ಏನೂ ಹಣವಿಲ್ಲದ ಋಷಿಗಳು ಶ್ರದ್ಧೆಯಿಂದ ಸದ್ಗತಿ ಪಡೆದಿದ್ದಾರೆ.

-ಗರುಡ ಪುರಾಣ

★ ಕಥೆಗಳು ಬದುಕಿನ ದಾರಿದೀಪ. ಜಗತ್ತನ್ನು ಅರಿತುಕೊಳ್ಳಲು ಕಥೆ, ಕಾದಂಬರಿಗಳೇ ಸರಿಯಾದ ಮಾರ್ಗ.

-ಶಶಿ ದೇಶಪಾಂಡೆ

★ ಒಳ್ಳೆಯ ಗುಣಗಳನ್ನು ಗೌರವಿಸುವುದರಿಂದ, ಮನಸ್ಸುಗಳು ಒಗ್ಗೂಡುತ್ತವೆ.

-ಅ.ನ.ಕೃ.

★ ಸುಳ್ಳು ಹೇಳುವುದರಿಂದ ಯಾರದ್ದಾದರೂ ಪ್ರಾಣ ಉಳಿಯುವಂತಿದ್ದರೆ– ಅದು ಪಾಪ ಆಗುವುದಿಲ್ಲ!

-ಶೇಕ್ಸ್‌ಪಿಯರ್

★ ಚಿಂತೆ ಜೀವನದ ಶತ್ರು ಎಂದು ನನಗೆ ತಿಳಿದಿದೆ.

-ಗುರು ನಾನಕದೇವ

★ ಕೋಲನ್ನು ಉಪಯೋಗಿಸದ ತಂದೆ ತಾಯಿಗಳು ಮಕ್ಕಳ ಹಿತಚಿಂತಕರಲ್ಲ!

-ಬೈಬಲ್

★ ಯಾರು ಎಲ್ಲ ರೀತಿಯಿಂದ ಹಿಂಸೆಯನ್ನು ಬಿಟ್ಟಿದ್ದಾರೋ, ಎಲ್ಲವನ್ನೂ ಸಹಿಸಿಕೊಳ್ಳುತ್ತಾರೆಯೋ, ಎಲ್ಲರಿಗೂ ಆಶ್ರಯವಾಗಿದ್ದಾರೆಯೋ ಅಂಥ ಜನರು ಸ್ವರ್ಗ ಪಡೆಯುತ್ತಾರೆ.

-ಸುಭಾಷಿತ

★ ನಾಲ್ಕು ವೇದಗಳನ್ನು ಕಲಿತು, ಹದಿನೆಂಟು ಸ್ಮೃತಿಗಳನ್ನು ವ್ಯಾಖ್ಯಾನ ಮಾಡಿಯೂ ಆತ್ಮಜ್ಞಾನ ಸಂಪಾದಿಸದೆ ಹೋದಮೇಲೆ, ಅಷ್ಟು ಶ್ರಮವೂ ವ್ಯರ್ಥವೇ ಸರಿ.

-ಪಂಚತಂತ್ರ

★ ಹಣ ಎಂಬುದು ಸುಖವಿಹಾರ ಮತ್ತು ವಿಲಾಸಗಳಿಗೆ ಉಪಯೋಗವಾಗುವುದು ಸಲ್ಲದು. ಅದು ಸಂಪತ್ತಿನ ದುರುಪಯೋಗ.

-ಹಾ.ಮಾ.ನಾ.

★ ಮನುಷ್ಯ ಯಾರನ್ನು ಪ್ರೀತಿ ಮಾಡುತ್ತಾನೋ, ಅವರಿಂದ ತುಂಬ ಸುಲಭದಲ್ಲಿ ಮೋಸಗೊಳ್ಳುತ್ತಾನೆ!

-ಮೋಲಿಯರ್